# ಮಹಾತಾಯಿ ಮೇರಿ

**ಸೇವಂತಿ ಡಿ. ರೈ**



ದೇವರ ಕೃಪೆಗೆ ಪಾತ್ರಳಾದ ಪರಮ ಪವಿತ್ರ ಮೇರಿ ದೈವಾಂಶ ಸಂಭೂತನಾದ ದೇವರ ಮಗನನ್ನು ತನ್ನ ಒಡಲಲ್ಲಿ ಹೊತ್ತು ಜನ್ಮಕೊಟ್ಟ ಮಹಾತಾಯಿ. ಮೇರಿ ಎಂಬ ಪದದ ಮೂಲ ಅರ್ಥ Bitterness, ಅಂದರೆ 'ಕಹಿ.' ಆಕೆ ತನ್ನ ಜೀವನದ ಉದ್ದಕ್ಕೂ ಅನುಭವಿಸಿದ ಕಷ್ಟಯಾತನೆಗಳಿಂದಾಗಿ ಮೇರಿ ಎಂಬ ಹೆಸರು ಅವಳಿಗೆ ಅನ್ವರ್ಥನಾಮವಾದಂತಾಯಿತು. ಆಕೆಯನ್ನು ಪ್ರೀತಿಯಿಂದ ಮರಿಯಾ ಎಂದು ಕರೆಯಲಾಗುತ್ತಿತ್ತು. ಯೇಸು ಕ್ರಿಸ್ತನನ್ನು ದೇವರ ಮಗನೆಂದು ನಂಬಿರುವ ಕ್ರೈಸ್ತರು, ಯೇಸುವಿನ ಇಹಲೋಕದ ತಾಯಿತಂದೆಯರಾದ ಮೇರಿ ಮತ್ತು ಜೋಸೆಫರನ್ನು ಸಂತರ ಸ್ಥಾನಕ್ಕೆ ಏರಿಸಿ, ಅವರಿಗೆ ದೇವಾಲಯಗಳನ್ನು ಕಟ್ಟಿ ಪೂಜಿಸುವರು.

ಕ್ರಿಸ್ತ ಪೂರ್ವದ ಕೊನೆಯ ಶತಮಾನದಲ್ಲಿ (ಕ್ರಿ. ಪೂ. ೧ ನೇ ಶತಮಾನ) ಆಗಸ್ಟಸ್ ಎಂಬವನು ರೋಂ ಸಾಮ್ರಾಜ್ಯದ ಚಕ್ರವರ್ತಿಯಾಗಿದ್ದನು. ಹೇರೋದನು (Herod) ಜೆರುಸಲೇಮ್ ಸೇರಿದಂತೆ ಜೂಡಾದ (Judea) ಅರಸನಾಗಿದ್ದನು. ಪಿಲಾತನು (Pilat) ಜೆರುಸಲೇಮಿನ ರಾಜ್ಯಪಾಲನಾಗಿದ್ದನು. ಆ ಪ್ರದೇಶದಲ್ಲಿ ಸಂಪ್ರದಾಯವಾದಿಗಳಾದ ಯೆಹೂದ್ಯರೇ ಅಧಿಕ ಸಂಖ್ಯೆಯಲ್ಲಿದ್ದರು. ಆಡಳಿತಾಧಿಕಾರಿಗಳೆಲ್ಲಾ ಯೆಹೂದ್ಯರೇ ಆಗಿದ್ದರು.

ಜೆರುಸಲೇಮಿನ ನಜರತ್ ಎಂಬ ಹಳ್ಳಿಯಲ್ಲಿ ಜೋಕಿಮ್ ಮತ್ತು ಅನ್ನ ಎಂಬ ಯೆಹೂದಿ ದಂಪತಿಗಳಿಗೆ ಒಂದು ಹೆಣ್ಣು ಶಿಶು ಜನಿಸುತ್ತದೆ. ಅದಕ್ಕೆ ಅವರು ಮೇರಿ ಎಂದು ನಾಮಕರಣ ಮಾಡಿದರು. ಮುದ್ದಿನ ಮಗಳಾದ ಮೇರಿ, ತನ್ನ ತಂದೆತಾಯಿಗಳ ಏಕಮಾತ್ರ ಪುತ್ರಿ.

ಮೇರಿಯ ಮಾತಾಪಿತರು ಬಡವರಾಗಿದ್ದರೂ, ಧರ್ಮಭೀರುಗಳು, ದೈವಭಕ್ತರು ಮತ್ತು ಸತ್ಯಸಂಧರು. ಮನೆಯಲ್ಲಿ ನಿತ್ಯದ ಊಟಕ್ಕೂ ಕೆಲವೊಮ್ಮೆ ತೊಂದರೆಯಿತ್ತು. ಮೇರಿ ತನ್ನ ತಂದೆ ತಾಯಿಯರಿಗೆ ಮನೆಕೆಲಸದಲ್ಲಿ, ನೇಯ್ಗೆ ಕೆಲಸದಲ್ಲಿ – ಹೀಗೆ ಎಲ್ಲಾ ಕೆಲಸಗಳಲ್ಲೂ ಸಹಾಯ ಮಾಡುತ್ತಾ ಬಡತನದಲ್ಲಿ ಜೀವನ ಸಾಗಿಸುತ್ತಿದ್ದಳು. ಕಷ್ಟಕಾರ್ಪಣ್ಯಗಳನ್ನು ಸಹಿಸುವ ಶಕ್ತಿಯನ್ನು ಆ ಪುಟ್ಟಬಾಲೆ ಮೇರಿ ಹೀಗೆ ಕರಗತಮಾಡಿಕೊಂಡಿದ್ದಳು.

ದೈವಭಕ್ತಳಾದ ಮೇರಿ, ತನ್ನ ಎಲ್ಲಾ ಕೆಲಸಕಾರ್ಯಗಳನ್ನು ದೇವರಿಗೆ ಸಮರ್ಪಿಸಿ, ದೈವ ಸ್ಮರಣೆಯಲ್ಲೇ ಇರುತ್ತಿದ್ದಳು. ತನ್ನ ಬೇಕುಬೇಡಗಳನ್ನೆಲ್ಲವನ್ನೂ ಮೌನವಾಗಿ ದೇವರಲ್ಲಿ ಹೇಳಿಕೊಂಡು, ಸಂಪೂರ್ಣವಾಗಿ ತನ್ನನ್ನು ದೇವರಿಗೆ ಸಮರ್ಪಿಸಿಕೊಂಡಿದ್ದಳು. ದೇವನೊಬ್ಬನೆ ಸತ್ಯ ಎಂಬ ಅರಿವು ಆ ಬಾಲೆಯ ಮನದಲ್ಲಿತ್ತು. ತನ್ನನ್ನು ದೇವರಿಗೆ ಸಂಪೂರ್ಣವಾಗಿ ಅರ್ಪಿಸಿಕೊಂಡ ಮೇರಿಯನ್ನು ದೇವರು ಆಕೆಯ ಇಪ್ಪತ್ತನೇ ವಯಸ್ಸಿನಲ್ಲಿ ಲೋಕದ ಕಲ್ಯಾಣಕ್ಕಾಗಿ ಉಪಯೋಗಿಸಿಕೊಂಡನು.

ಅಷ್ಟು ಹೊತ್ತಿಗಾಗಲೇ ಜೋಸೆಫ್ ಎಂಬಾತನಿಗೆ ಮೇರಿಯನ್ನು ವಿವಾಹ ಮಾಡಿಕೊಡಬೇಕೆಂದು ಒಪ್ಪಂದವಾಗಿತ್ತು. ಯೆಹೂದ್ಯರ ಮೊದಲನೆಯ ಅರಸ ಡೇವಿಡನ ವಂಶದವನಾದ ಜೋಸೆಫನು ವೃತ್ತಿಯಲ್ಲಿ ಬಡಗಿಯಾಗಿದ್ದನು. ದೈವಭಕ್ತನೂ ಸಜ್ಜನನೂ ಆಗಿದ್ದ ಜೋಸೆಫನಿಗೆ ಕಷ್ಟಕಾರ್ಪಣ್ಯಗಳ ಅರಿವಿತ್ತು. ಎಲ್ಲವೂ ದೈವೇಚ್ಛೆಯಂತೆ ನಡೆಯುವುದೆಂದು ನಂಬಿದ್ದ ಜೋಸೆಫನು ಮೇರಿಯು ತನ್ನ ಜೀವನ ಸಂಗಾತಿಯಾಗುವುದು ದೇವರ ಕೃಪೆ ಎಂದು ಭಾವಿಸಿದ್ದನು.

'ಆಶೀರ್ವದಿಸಲ್ಪಟ್ಟ ಸ್ತ್ರೀ' ಎಂದೇ ಗೌರವಿಸಲ್ಪಟ್ಟ ಮೇರಿಯ ಬಳಿಗೆ ದೇವದೂತನು ಬಂದು "ವಿವಾಹಕ್ಕೆ ನಿಶ್ಚಿತಾರ್ಥ ಹೊಂದಿದ ಕನ್ಯೆಯಾದ ನಿನ್ನನ್ನು ಸೃಷ್ಟಿಕರ್ತನು ತನ್ನ ಸಾಧನವಾಗಿ ಆರಿಸಿದ್ದಾನೆ. ಮನುಕುಲದ ಉದ್ಧಾರಕ್ಕಾಗಿ ನಿನ್ನಲ್ಲಿ ಪವಿತ್ರಾತ್ಮನ (Holy Spirit) ಶಕ್ತಿಯಿಂದ ದೇವಪುತ್ರನು ಜನಿಸುವನು. ಆತನಿಗೆ ಯೇಸು ಎಂದು ನಾಮಕರಣ ಮಾಡು" ಎಂದನು.

ನಿವೃತ್ತ ಇತಿಹಾಸ ಅಧ್ಯಾಪಕಿಯಾದ ಲೇಖಕರು ಮೈಸೂರಿನ ನಿವಾಸಿಗಳು, ಆಶ್ರಮದ ಭಕ್ತರು, ಸಾಹಿತ್ಯಾಸಕ್ತರು.

ದೇವರ ಮೇಲೆ ಅಪಾರ ನಂಬಿಕೆ ಇದ್ದ ಮೇರಿ, ಪರಮಾತ್ಮನು ನಡೆಸಿದಂತೆ ನಡೆವೆನೆಂದು ತೀರ್ಮಾನಿಸಿದ್ದಳು. ದೈವೇಚ್ಛೆ ಎಂದು ಬಂದುದೆಲ್ಲವನ್ನೂ ಸ್ವೀಕರಿಸುತ್ತಿದ್ದ ಆಕೆಗೆ, ಲೋಕಕಲ್ಯಾಣಕ್ಕಾಗಿ ಜನಿಸುವ ದೇವಪುತ್ರನ ಜನನಿಯಾಗುವ ಭಾಗ್ಯ ಒದಗಿತು. ಸಂಪ್ರದಾಯಬದ್ಧ ಯೆಹೂದಿ ಸಮಾಜದಲ್ಲಿ ವಿವಾಹಕ್ಕೆ ಮೊದಲೇ ತಾಯಿಯಾಗುವುದು ಅವಮಾನಕರ ಎಂದೇ ತಿಳಿಯಲಾಗಿತ್ತು. ಲೋಕಹಿತಕ್ಕಾಗಿ ದೇವರು ತನ್ನನ್ನು ಆರಿಸಿಕೊಂಡಿರುವುದನ್ನು ತಿಳಿದಿದ್ದ ಮೇರಿ, ಸಮಾಜದ ಅವಹೇಳನೆ ನಿಂದನೆಗಳನ್ನು ಸಹಿಸಿಕೊಂಡಳು. "ನಾನು ದೇವರ(ಕರ್ತ) ದಾಸಿ, ದೇವರ ಮಾತಿನಂತೆ ನಡೆಯುವೆ" ಎಂದು ತನ್ನನ್ನು ಸಂಪೂರ್ಣವಾಗಿ ದೇವರಿಗೆ ಸಮರ್ಪಿಸಿದಳು. ಆ ಭಗವಂತನ ಮೇಲಿನ ನಂಬಿಕೆ ಮತ್ತು ಪ್ರೀತಿಯಿಂದಾಗಿ ಆಕೆಗೆ ಯಾವ ಅಂಜಿಕೆಯಾಗಲಿ, ಪಾಪಪ್ರಜ್ಞೆಯಾಗಲಿ ಇರಲಿಲ್ಲ.

ಇತ್ತ ಜೋಸೆಫನಿಗೆ ಕನಸೊಂದು ಬಿದ್ದು, ತನ್ನೊಡನೆ ವಿವಾಹಕ್ಕೆ ನಿಶ್ಚಿತವಾದ ಮೇರಿಯ ಗರ್ಭದಿಂದ ದೇವರ ಮಗನು ಲೋಕದ ಜನರ ಪಾಪವನ್ನು ತೊಳೆಯಲಿಕ್ಕಾಗಿ ಜನಿಸುವನು; ಆತನಿಗೆ 'ಯೇಸು' ಎಂದು ಹೆಸರನ್ನಿಡಬೇಕು; ಮೇರಿ ಪರಿಶುದ್ಧಳು, ಕನ್ಯೆ ಎಂಬ ಸಂದೇಶವು ಒಬ್ಬ ದೇವದೂತನಿಂದ ದೊರೆಯಿತು.

ಮೇರಿ ಮತ್ತು ಜೋಸೆಫರು ಸತಿಪತಿಗಳಾದರು. ಅವರು ಸಂಸಾರವನ್ನು ಆರಂಭಿಸಿದ ಕೆಲವೇ ತಿಂಗಳಲ್ಲಿ ಚಕ್ರವರ್ತಿಯ ಆಜ್ಞೆಯಂತೆ ಜನಗಣತಿಗೆ (census) ಹೆಸರು ಬರೆಸಿಕೊಳ್ಳಲು ಬೆತ್ಲೆಹೆಮ್‌ಗೆ ಹೋಗಬೇಕಾಯಿತು. ಆಗ ಮೇರಿಯ ಪ್ರಸವದ ದಿನ ಸಮೀಪಿಸುತ್ತಿತ್ತು. ಕತ್ತೆಯ ಮೇಲೆ ಕುಳಿತು ದುಸ್ತರವಾದ, ಕಡಿದಾದ, ಗುಡ್ಡಬೆಟ್ಟಗಳ ಹಾದಿಯಲ್ಲಿ ಪ್ರಯಾಣಿಸಿದ ಈ ದಂಪತಿಗಳು ಬೆತ್ಲಹೆಮ್ ತಲುಪಿದರು. ಅಲ್ಲಿ ಉಳಿದುಕೊಳ್ಳಲು ಅವರಿಗೆ ಎಲ್ಲೂ ಸ್ಥಳ ದೊರೆಯಲಿಲ್ಲ. ಕೊನೆಗೆ ಅಶ್ವಶಾಲೆಯೊಂದರಲ್ಲಿ ಅವರು ತಂಗಿದರು. ಡಿಸೆಂಬರ್ ೨೪ ರ ಮಧ್ಯರಾತ್ರಿ (ಕ್ರಿ. ಪೂ. ೪) ಸಾಧುಪ್ರಾಣಿಗಳ ಕೊಟ್ಟಿಗೆಯಲ್ಲೇ, ದೈವಿಕ ಕಳೆಯಿಂದ ಕೂಡಿದ ಶಿಶುವಿಗೆ ಮೇರಿ ಜನ್ಮಕೊಟ್ಟಳು. ಆಗ ಆಕಾಶದಲ್ಲಿ ವಿಶೇಷವಾದ ಒಂದು ದೊಡ್ಡ ನಕ್ಷತ್ರ ಬೆಳಗುತ್ತಿತ್ತು. ಜನರ ಉದ್ಧಾರಕ್ಕಾಗಿ ದೇವರು ತನ್ನ ಮಗನನ್ನು ಕಳುಹಿಸುತ್ತಾನೆ ಎಂದು ಕಾಯುತ್ತಿದ್ದ ಪೂರ್ವದೇಶದ ಜೋಯಿಸರು, ಕುರುಬರೊಡನೆ ಕೂಡಿಕೊಂಡು ಆ ಕೊಟ್ಟಿಗೆಗೆ ಬಂದು, ನವಜಾತ ಶಿಶುವಿಗೆ ಪ್ರಣಾಮ ಮಾಡಿದರು, ಸ್ತುತಿಸಿದರು. ಇವನು ದೇವಕುಮಾರ, ಜಗದೋದ್ಧಾರಕನೆಂದು ತಿಳಿಸಿದರು. ಮಗುವನ್ನು ಮಡಿಲಲ್ಲಿ ಇಟ್ಟುಕೊಂಡ ಮೇರಿ, ತುಂಬಾ ಸಂತೋಷದಲ್ಲಿದ್ದಳು. ದೇವರನ್ನೇ ಶಿಶುವಾಗಿ ಪಡೆದ ತಾನು ಧನ್ಯೆ ಎಂದುಕೊಂಡಳು. ಆಕೆಯ ಕಣ್ಣಿನಿಂದ ಇಳಿಯುತ್ತಿದ್ದ ಆನಂದ ಬಾಷ್ಪಗಳು ಆಕೆಯ ಮಡಿಲಲ್ಲಿದ್ದ ದೇವಕುಮಾರನಿಗೆ ಅರ್ಪಿತವಾಗುತ್ತಿದ್ದವು. ಶಿಶುವಿಗೆ ನಲವತ್ತು ದಿನಗಳು ತುಂಬಿದಾಗ, ಮೇರಿ ಮಗುವನ್ನು ದೇವಾಲಯಕ್ಕೆ ತೆಗೆದುಕೊಂಡು ಹೋಗಿ, ದೇವರ ಮುಂದೆ ಇಟ್ಟು ಪ್ರಾರ್ಥಿಸಿದಳು.

ಆ ಊರಿನ ಅರಸ ಹೆರೋದನು ತುಂಬಾ ದುಷ್ಟ. ಲೋಕೋದ್ಧಾರಕನೊಬ್ಬ ಬರುತ್ತಾನೆ ಎಂಬ ವಾರ್ತೆ ಅವನಿಗೆ ಮೊದಲೇ ತಿಳಿದಿತ್ತು. ಆದರೆ ಹೇಗೆ, ಯಾರು ಎಂಬುದು ತಿಳಿದಿರಲಿಲ್ಲ. ತನ್ನ ಜೀವರಕ್ಷಣೆಗಾಗಿ ಆ ಊರಿನ ಎಲ್ಲಾ ನವಜಾತ ಶಿಶುಗಳನ್ನು ಕೊಲ್ಲಿಸಲು ಆಜ್ಞೆ ಮಾಡಿದ (ತನ್ನ ಸಾವಿಗೆ ಕಾರಣನಾಗುವ ಕೃಷ್ಣನು ಎಲ್ಲಿದ್ದಾನೆ, ಹೇಗಿದ್ದಾನೆ ಎಂದು ತಿಳಿಯದ ಮಥುರೆಯ ಅರಸ ದುಷ್ಟ ಕಂಸನು ತನ್ನ ರಾಜ್ಯದ ಎಲ್ಲಾ ನವಜಾತ ಶಿಶುಗಳನ್ನು ಕೊಲ್ಲಿಸಲು ಆಜ್ಞೆ ಮಾಡಿದ್ದನ್ನು ಇಲ್ಲಿ ಸ್ಮರಿಸಬಹುದು). ಅಂತಹ ಸಂದರ್ಭದಲ್ಲಿ ದೇವದೂತನೊಬ್ಬ ಬಂದು ಜೋಸೆಫನನ್ನು ಈಜಿಪ್ಟ್ ದೇಶಕ್ಕೆ ಹೋಗಲು ಹೇಳಿದನು. ಅಂತೆಯೇ ಜೋಸೆಫನು ಮೇರಿ ಮತ್ತು ಶಿಶು ಯೇಸುವನ್ನು ಕರೆದುಕೊಂಡು ಈಜಿಪ್ಟ್ ದೇಶಕ್ಕೆ ಹೋಗಿ ನೆಲೆಸಿದನು. ಹೇರೋದನ ಮರಣದ ಬಳಿಕ, ದೇವದೂತನ ಕರೆಯಂತೆ ಅವರೆಲ್ಲಾ ಹಿಂದೆ ಬಂದು, ನಜರತ್‌ನಲ್ಲಿ ನೆಲೆಸಿದರು.

ಜೋಸೆಫ್ ಮತ್ತು ಮೇರಿ ಬಡತನದಲ್ಲಿ ಜೀವನ ಸಾಗಿಸುತ್ತಿದ್ದರು. ಜೋಸೆಫ್ ಬಡಗಿಯಾಗಿದ್ದು, ಆತ ಮರದ ಕೆಲಸ ಮಾಡುತ್ತಿರುವಾಗ ಬಾಲಕ ಯೇಸು ಸಹಾಯ ಮಾಡುತ್ತಿದ್ದನು. ದೈವಾಂಶ ಸಂಭೂತನಾದ ಯೇಸುವನ್ನು ಮೇರಿ ಬಹಳ ಜತನದಿಂದ ನೋಡಿಕೊಳ್ಳುತ್ತಿದ್ದಳು. ಲೋಕಕಲ್ಯಾಣಕ್ಕಾಗಿ ದೇವರೇ ಮಾನವ ರೂಪದಲ್ಲಿರುವುದಾದರೂ, ಮೇರಿ ಆ ಮಗು ತನ್ನದೇ ಮಗು, ತನ್ನ ರಕ್ತವನ್ನು ಹಂಚಿಕೊಂಡು ಹುಟ್ಟಿದ ಶಿಶು, "ನಾನೇ ಧನ್ಯೆ" ಎಂದುಕೊಂಡು ಆ ಶಿಶುವನ್ನು ಮುದ್ದಾಡಿದಳು. ಯೇಸುವಿನ ಬಾಲಚೇಷ್ಟೆಯಲ್ಲಿ ಮೈಮರೆತಳು.

ಯೇಸು ಬೆಳೆದು ಬಾಲಕನಾದ. ಆತನಿಗೆ ತನ್ನ ತಂದೆತಾಯಿಗಳ ಮೇಲೆ ಗೌರವ, ಪ್ರೀತಿ. ತನ್ನ ತಂದೆಗೆ ಆತನ ಕೆಲಸದಲ್ಲಿ ಸಹಾಯಮಾಡುತ್ತಾ ಬೆಳೆಯುತ್ತಿದ್ದ. ತನ್ನ ತಾಯಿಯ ಮೇಲೆ ಹೆಚ್ಚಿನ ಪ್ರೀತಿಯಿದ್ದ ಯೇಸು, ಎಂದೂ ತಾಯಿಯ ಮಾತನ್ನು ಮೀರಿದವನಲ್ಲ. ಮೇರಿಗೂ ಯೇಸುವಿನ ಮೇಲೆ ತನ್ನ ಇತರ ಮಕ್ಕಳಿಗಿಂತ ಹೆಚ್ಚಿನ ಪ್ರೀತಿ. ಯೇಸು ದೈವಾಂಶ ಸಂಭೂತನೆಂದು ಗೊತ್ತಿದ್ದರೂ ತನ್ನ ಮಗನೆಂಬುದನ್ನು ಆಕೆ ಮರೆತಿರಲಿಲ್ಲ. ಅವಳದು ದೊಡ್ಡ ಸಂಸಾರ. ಹೀಗಾಗಿ ಆಕೆಗೆ ಹಗಲೆಲ್ಲಾ ಕೆಲಸವೇ ಆಗುತ್ತಿತ್ತು. ಮಕ್ಕಳನ್ನು ಸಾಕುವುದು ಸುಲಭವಾಗಿರಲಿಲ್ಲ. ಮನೆಗೆಲಸ, ಎಲ್ಲರ ಊಟ ತಿಂಡಿ, ಮಕ್ಕಳಿಗೆ ತಿನ್ನಿಸುವುದು, ಸನ್ಮಾರ್ಗದಲ್ಲಿ ನಡೆಸುವುದು, ದಿನನಿತ್ಯದ ಪ್ರಾರ್ಥನೆ ಕಲಿಸುವುದು, ಅಲ್ಲದೆ, ಅವರ ಬಟ್ಟೆಬರೆಗಳನ್ನೂ ತಾನೇ ಸಿದ್ಧಪಡಿಸಿಕೊಡುವುದು ಇತ್ಯಾದಿ ಹಲವು ಕೆಲಸಗಳು ಅವಳಿಗೆ. ಹತ್ತಿಯಿಂದ ನೂಲು ತೆಗೆದು, ಕೈಮಗ್ಗದಲ್ಲಿ ಬಟ್ಟೆ ನೇಯುವುದು ಅವಳಿಗೆ ಅಷ್ಟೇನು ಕಷ್ಟವಾಗುತ್ತಿರಲಿಲ್ಲ. ತನ್ನ ಕೈಯಿಂದಲೇ ತಯಾರಿಸಿದ ಉಡುಪನ್ನು ಯೇಸು ಧರಿಸಿದಾಗ ಅವಳಿಗೆ ಅತ್ಯಾನಂದವಾಗುತ್ತಿತ್ತು. ತನ್ನ ಹೆತ್ತವ್ವ ಮಮತೆಯಿಂದ ತಯಾರಿಸಿದ ನೀಳವಾದ ಉತ್ತರೀಯ,

ತನ್ನ ದೇಹವನ್ನು ಸುತ್ತಿಕೊಂಡಾಗ ತಾಯಿಯ ಅಪ್ಪುಗೆಯಲ್ಲಿದ್ದ ಅನುಭವ ಬಾಲಯೇಸುವಿಗಾಗುತ್ತಿತ್ತು.

ಪ್ರತಿ ವರ್ಷ ಜರುಸಲೇಮಿನ ಹಬ್ಬಕ್ಕೆ ಜೋಸೆಫ್ ಮತ್ತು ಮೇರಿ ಹೋಗುತ್ತಿದ್ದರು. ಎಂದಿನಂತೆ ಆ ವರ್ಷವೂ ಹೋಗಿದ್ದರು. ಆಗ ಯೇಸುವಿಗೆ ಹನ್ನೆರಡು ವರ್ಷ. ಜಾತ್ರೆಯಿಂದ ಹಿಂತಿರುಗಿದಾಗ ಯೇಸು ಎಲ್ಲೂ ಕಾಣಿಸಲಿಲ್ಲ. ಮೇರಿಯ ಅಳಲು ಹೇಳತೀರದು, ಎಲ್ಲೆಲ್ಲೂ ಹುಡುಕಿದರು. ಮೂರನೇ ದಿನ ದೇವಾಲಯ ಒಂದರಲ್ಲಿ ಹಲವಾರು ಹಿರಿಯ ಪಂಡಿತರ ಮಧ್ಯೆ ಧಾರ್ಮಿಕ ವಿಷಯದಲ್ಲಿ ನಡೆಯುತ್ತಿದ್ದ ಚರ್ಚೆಯನ್ನು ಕೇಳಿಕೊಂಡು ಯೇಸು ಕುಳಿತಿರುವುದನ್ನು ಕಂಡರು. ಹೀಗೇಕೆ ತಪ್ಪಿಸಿಕೊಂಡೆ ಎಂದು ಜೋಸೆಫ್ ಕೇಳಿದಾಗ "ನಾನು ನನ್ನ ತಂದೆಯ ಮನೆಯಲ್ಲಿದ್ದೆ" ಎಂದು ಯೇಸು ಉತ್ತರ ಕೊಟ್ಟನು. ಮೇರಿಗೆ ತಕ್ಷಣ ಇದರ ಆಧ್ಯಾತ್ಮಿಕ ಅರ್ಥ ಹೊಳೆಯಿತು.

ಯೇಸುವಿಗೆ ಹಿಂಬಾಲಕರು ಅನೇಕರಿದ್ದರು. ಮೇರಿ ಕೂಡ ಅವನ ಜತೆಯಲ್ಲೇ ಇರುತ್ತಿದ್ದಳು. ಕಾನಾ (Cana) ಎಂಬ ಊರಿನಲ್ಲಿ ನಡೆಯುತ್ತಿದ್ದ ಒಂದು ವಿವಾಹ ಸಮಾರಂಭಕ್ಕೆ ಅವರೆಲ್ಲಾ ಹೋಗಿದ್ದರು. ಅಲ್ಲಿ ದ್ರಾಕ್ಷಾರಸ ಮುಗಿದು ಹೋಯಿತು. ಇನ್ನೂ ಅನೇಕರಿಗೆ ದ್ರಾಕ್ಷಾರಸ ಕೊಡಲೇಬೇಕಾಗಿತ್ತು. ಮದುವೆ ಮನೆಯವರು ಕಂಗಾಲಾದರು. ಇದನ್ನು ಗಮನಿಸಿದ ಮೇರಿ, ತನ್ನ ಮಗ ಯೇಸುವನ್ನು ಸಮೀಪಿಸಿ, ದ್ರಾಕ್ಷಾರಸ ಮುಗಿದಿರುವ ವಿಷಯ ತಿಳಿಸಿದಳು. ತನ್ನ ಮಗನಲ್ಲಿ ವಿಶೇಷವಾದ ಪವಾಡ ಶಕ್ತಿಯಿದೆ ಎಂದು ತಿಳಿದಿದ್ದ ಮೇರಿ, ಮಗ ಏಸುವಿಗೆ ದ್ರಾಕ್ಷಾರಸವನ್ನು ವರ್ಧಿಸಲು ಹೇಳಿದಳು. ಒಂದು ಪಾತ್ರೆಯಲ್ಲಿ ನೀರನ್ನು ತರಿಸಿ, ಅದನ್ನು ಯೇಸು ಮುಟ್ಟಿ ಆಶೀರ್ವದಿಸಿದಾಗ ನೀರು ದ್ರಾಕ್ಷಾರಸವಾಗಿ ಪರಿವರ್ತಿತವಾಯಿತು. ಇದು ಸಾರ್ವಜನಿಕವಾಗಿ ಯೇಸು ಮಾಡಿದ ಮೊದಲ ಪವಾಡ.

ಯೇಸು ತನ್ನ ಸಂಗಡಿಗರ ಜತೆ ಊರಿಂದೂರಿಗೆ ಹೋಗುತ್ತಿದ್ದಾಗಲೂ, ಆರಂಭದಲ್ಲಿ ಮೇರಿ ಆತನನ್ನು ಹಿಂಬಾಲಿಸುತ್ತಿದ್ದಳು. ಒಂದು ಕ್ಷಣ ಯೇಸು ಆಕೆಯ ಕಣ್ಣಿಂದ ದೂರವಾದರೂ ಆಕೆಗೆ ದುಃಖವಾಗುತ್ತಿತ್ತು. ಆತನ ತಾಯಿಯಂತೆ, ದಾಸಿಯಂತೆ, ಶಿಷ್ಯೆಯಂತೆ ಆತನ ಸೇವೆ ಮಾಡುತ್ತಿದ್ದಳು. ಆದರೆ ಯೇಸುವಿನ ಕೆಲಸಕಾರ್ಯಗಳಲ್ಲಿ, ಪ್ರವಚನಗಳಲ್ಲಿ ಆಕೆ ಮಧ್ಯೆ ಪ್ರವೇಶಿಸುತ್ತಿರಲಿಲ್ಲ, ವಿರೋಧಿಸಲಿಲ್ಲ. ಆಕೆ ಪವಿತ್ರಾತ್ಮನ ಆಲಯವೇ ಆಗಿದ್ದಳು (The Temple of Holy Spirit). ಮೇರಿಗೆ ಐವತ್ತು ವರ್ಷಗಳಾಗಿದ್ದಾಗ, ಯೇಸುವಿಗೆ ೩೦ ವರ್ಷಗಳಾಗಿತ್ತು. ಆತನಿಗೆ ಹಿಂಬಾಲಕರೂ, ಶಿಷ್ಯರೂ, ಅಧಿಕ ಸಂಖ್ಯೆಯಲ್ಲಿದ್ದರು. ತಾನರಿತ ಸತ್ಯವನ್ನು ಯೇಸು ಊರಿಂದೂರಿಗೆ ಅಲೆಯುತ್ತಾ ಜನರಿಗೆ ಬೋಧಿಸುತ್ತಿದ್ದ. ಈ ಅವಧಿಯಲ್ಲಿ ತನ್ನ ಮಗನ ಜತೆ ಇದ್ದು ಆತನ ಆರೈಕೆ ಮಾಡಲು ಮೇರಿಗೆ ಸಾಧ್ಯವಾಗುತ್ತಿರಲಿಲ್ಲ. ಆದರೆ ಸದಾ ಆತನ ಚಿಂತನೆಯಲ್ಲೇ ಇರುತ್ತಿದ್ದಳು.

ಯೇಸು, ದೇವನ ಪಿತೃತ್ವವನ್ನೂ ಮಾನವರ ಭ್ರಾತೃತ್ವವನ್ನು (Fatherhood of God and Motherhood of Man) ಸಣ್ಣ ದೃಷ್ಟಾಂತ ಕತೆಗಳ ಮೂಲಕ ಜನರಿಗೆ ತಿಳಿಸುತ್ತಿದ್ದ. ಸಹಾನುಭೂತಿ ಪ್ರೀತಿ ಕ್ಷಮೆಗಳಿಗೆ ಮಹತ್ವ ಕೊಡುತ್ತಿದ್ದ. ಯೇಸುವಿನ ಶಿಷ್ಯರ ಸಂಖ್ಯೆ ಏರುತ್ತಿತ್ತು. ಯೇಸುವಿನ ಜನಪ್ರಿಯತೆ ಕಂಡ ಯಹೂದಿ ಧರ್ಮಗುರುಗಳು ಮಿಥ್ಯಾರೋಪ ಮಾಡಿ ಕೊನೆಗೆ ಅವನು ಶಿಲುಬೆಯನ್ನೇರುವ ಶಿಕ್ಷೆ ಅನುಭವಿಸುವಂತೆ ಮಾಡಿದರು. ಇದರಿಂದ ಮೇರಿಯ ಹೃದಯಕ್ಕಾದ ನೋವು ಅಷ್ಟಿಷ್ಟಲ್ಲ. ಜೀವನದುದ್ದಕ್ಕೂ ನೋವನ್ನು ಸಹಿಸಿಕೊಂಡು ತನ್ನ ಕರ್ತವ್ಯ ಮಾಡುತ್ತಿದ್ದ ಮೇರಿಗೆ ಯೇಸುವನ್ನು ಶಿಕ್ಷೆಗೆ ಗುರಿಪಡಿಸಿರುವುದನ್ನು ಕೇಳಿ ಸಹಿಸಲಾರದ ದುಃಖವಾಯಿತು. ಮಾನವರೂಪಿ ದೇವರ ತಾಯಿಯಾಗಿ ತಾನೇನೂ ಮಾಡಲು ಸಾಧ್ಯವಿಲ್ಲವಲ್ಲ ಎಂದು ಅವಳು ದುಃಖಿಸಿದಳು.

ಯೇಸು ತನ್ನ ಶಿಲುಬೆಯನ್ನು ತಾನೊಬ್ಬನೇ ಹೊತ್ತುಕೊಂಡು ಗೊಲ್ಗೊಥಾ ಬೆಟ್ಟವನ್ನು ಏರುತ್ತಿರುವಾಗ, ಆ ತಾಯಿಗಾದ ವೇದನೆ ವರ್ಣಿಸಲಸದಳ. ಮುಳ್ಳಿನ ಕಿರೀಟವನ್ನು ಧರಿಸಿ ತುಂಡು ಬಟ್ಟೆ ತೊಟ್ಟು, ಏಸು ಕಷ್ಟದಿಂದ ಬೆಟ್ಟವನ್ನೇರುತ್ತಿರುವಾಗ ಆತನ ಜತೆಯಲ್ಲಿ ಮೇರಿ ಮತ್ತು ಅವಳ ಇತರ ಮಕ್ಕಳು ಹಾಗೂ ಆತನ ಶಿಷ್ಯರೂ ಇದ್ದರು. ಆತನನ್ನು ಶಿಲುಬೆಗೆ ಏರಿಸುವಾಗ ಆ ಭಯಾನಕ ದೃಶ್ಯವನ್ನು ದುಃಖಿತೆ ಮೇರಿ ನೋಡಿದಳು. ಕ್ರಿ.ಶ. ೨೯ ರ ವೈಶಾಖ ಮಾಸದ ಮೊದಲ ಶುಕ್ರವಾರ ಇತರ ಭಕ್ತರ ಜತೆ ಶಿಲುಬೆಯ ಬುಡದಲ್ಲೇ ಇದ್ದಳು. ಯೇಸು ದೇವ ಕುಮಾರನೆಂದು ಮೇರಿ ತಿಳಿದಿದ್ದರೂ, ಹೆತ್ತೊಡಲಿನ ದುಃಖ ಸಾಗರದಲ್ಲಿ ಮೌನವಾಗಿ ಮುಳುಗಿದ್ದಳು. ಅವಳ ಅಳಲ ಕಡಲಿನಲ್ಲಿ ತೆರೆಗಳ ಅಬ್ಬರಕ್ಕೆ ಅವಕಾಶ ಇರಲಿಲ್ಲ.

ಶಿಲುಬೆಗೆ ಏರಿದ ಏಸು ಅಲ್ಲಿಂದಲೇ ತನ್ನ ತಾಯಿ ಮೇರಿಯನ್ನು ನೋಡಿದ. ಆಕೆಯ ಕ್ಷೇಮ ಚಿಂತನೆ ಮಾಡಿದ. ಅಲ್ಲೇ ಶಿಲುಬೆಯ ಬುಡದಲ್ಲಿದ್ದ ತನ್ನ ಪ್ರಿಯ ಶಿಷ್ಯ ಯೋಹಾನನನ್ನು ಕುರಿತು "ಇಗೋ ನಿನ್ನ ತಾಯಿ" ಎಂದು ಮೇರಿಯತ್ತ ದೃಷ್ಟಿ ಹಾಯಿಸಿದ. ಮೇರಿಯನ್ನು ಕುರಿತು "ಇಗೋ ನಿನ್ನ ಮಗ" ಎಂದು ಯೋಹಾನನನ್ನು ತೋರಿಸಿದ. ಆ ದಿನದಿಂದ ಯೋಹಾನನು ಮೇರಿಯ ರಕ್ಷಣೆಯ ಜವಾಬ್ದಾರಿ ಹೊತ್ತು, ತನ್ನ ಮನೆಯಲ್ಲಿ ಇಟ್ಟುಕೊಂಡು, ತನ್ನ ತಾಯಿಯಂತೆ ಆಕೆಯನ್ನು ನೋಡಿಕೊಂಡ.

ಏಸುವು ಶಿಲುಬೆಗೇರುವುದನ್ನಲ್ಲದೆ, ಆತನ ಸ್ವರ್ಗಾರೋಹಣದ ದರ್ಶನವನ್ನೂ ಪಡೆದ ಮಹಾತಾಯಿ ಮೇರಿ ಯೇಸುವಿನ ಪುನರುತ್ಥಾನದ ಬಳಿಕ, ದೇವರ ಸುವಾರ್ತೆಯನ್ನು ಪ್ರಸಾರ ಮಾಡುತ್ತಾ ಪ್ರಾರ್ಥನೆಯಲ್ಲಿ ದಿನಕಳೆದಳು. ದೇವಪುತ್ರನ ತಾಯಿಯಾಗುವ ಸೌಭಾಗ್ಯವನ್ನು ಪಡೆದ ಆಕೆ ನಿಜಕ್ಕೂ ಧನ್ಯೆ!

✪